# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 47 (59)
ಸದಸ್ಯರ ಹೆಸರು : ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ)
ಉತ್ತರಿಸುವ ದಿನಾಂಕ : 13-02-2023
ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಹಾಗೂ ಸಕಾಲ ಸಚಿವರು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಮಂಜೂರಾದ ಮತ್ತು ಪ್ರಸ್ತುತ ಖಾಲಿ ಇರುವ ಉಪನ್ಯಾಸಕ ಹುದ್ದೆಗಳ ಸಂಖ್ಯೆ ಎಷ್ಟು; | ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಮಂಜೂರಾದ ಉಪನ್ಯಾಸಕರ ಹುದ್ದೆಗಳ ಸಂಖ್ಯೆ: **12858** ಹಾಗೂ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳ ಸಂಖ್ಯೆ:**3955** |
| ಆ) | ಯಾವ ಯಾವ ವಿಷಯಗಳಲ್ಲಿ ಎಷ್ಟು ಸಂಖ್ಯೆಯ ಉಪನ್ಯಾಸಕ ಹುದ್ದೆಗಳು ಖಾಲಿ ಇವೆ; (ವಿಷಯವಾರು ವಿವರ ನೀಡುವುದು) | ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿಯಿರುವ ವಿಷಯವಾರು ಉಪನ್ಯಾಸಕರ ಹುದ್ದೆಗಳ ವಿವರವನ್ನು **ಅನುಬಂಧ-1ರಲ್ಲಿ** ಒದಗಿಸಿದೆ. |
| ಇ) | ಸರ್ಕಾರಿ ಪಿಯು ಕಾಲೇಜುಗಳಿಗೆ ಕೆ.ಇ.ಎ ಮೂಲಕ 814 ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಪ್ರಸ್ತುತ ಯಾವ ಹಂತದಲ್ಲಿದೆ; (ವಿವರ ನೀಡುವುದು) | ಸರ್ಕಾರದ ಪತ್ರ ಸಂಖ್ಯೆ:ಇಪಿ 9 ಡಿಜಿಡಿ 2022 ದಿನಾಂಕ:18-08-2022ರಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ವಿವಿಧ 10 ವಿಷಯಗಳ 778 ಉಪನ್ಯಾಸಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸರ್ಕಾರದ ಅನುಮತಿಯನ್ನು ನೀಡಲಾಗಿದೆ.<br><br>ತದನಂತರ ಎನ್.ಇ.ಪಿ 2020ರನ್ವಯ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನ್ಯಾಸಕರ ನೇರ ನೇಮಕಾತಿಗೆ ಟಿ.ಇ.ಟಿ (Teachers Entrance Test) ಪ್ರವೇಶ ಪರೀಕ್ಷೆಯನ್ನು ಅಳವಡಿಸಬೇಕಾಗಿದ್ದು, ಟಿ.ಇ.ಟಿ ಅನುಷ್ಠಾನಗೊಳಿಸುವ ಸಂಬಂಧ ಅಳವಡಿಸಿಕೊಳ್ಳಬೇಕಾದ ಪಠ್ಯಕ್ರಮಗಳ ವಿವರಗಳು ಹಾಗೂ ಅನುಸರಿಸಬೇಕಾದ ವಿಧಾನಗಳ ಕುರಿತು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಸೂಕ್ತ ತಿದ್ದುಪಡಿ ತರುವ ಕುರಿತು ಕ್ರಮವಹಿಸಲಾಗುತ್ತಿದೆ. |
| ಈ) | ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ದೈಹಿಕ ಶಿಕ್ಷಣ ಉಪನ್ಯಾಸಕರ ಹುದ್ದೆಗಳನ್ನು ಈವರೆವಿಗೂ ಸೃಜಿಸದಿರಲು ಕಾರಣಗಳೇನು; ಈ ಹುದ್ದೆಗಳನ್ನು ಸೃಜಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ: ಇದ್ದಲ್ಲಿ ಯಾವ ಕಾಲಮಿತಿಯಲ್ಲಿ ಸೃಜಿಸಲಾಗುವುದು: | ಪ್ರಸ್ತುತ 20 ದೈಹಿಕ ಶಿಕ್ಷಣ ಉಪನ್ಯಾಸಕರ ಹುದ್ದೆಗಳು ಮಂಜೂರಾಗಿರುತ್ತವೆ.<br><br>ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 43 ಟಿಪಿಯು 2018 ದಿನಾಂಕ:09-10-2019 ರನ್ವಯ ಪ್ರಥಮ ಮತ್ತು ದ್ವಿತೀಯ ಪಿಯುಸಿ ಪದವಿ ಪೂರ್ವ ತರಗತಿ ಸೇರಿ 120ಕ್ಕಿಂತ ಹೆಚ್ಚು ವಿದ್ಯಾರ್ಥಿಗಳ ಸಂಖ್ಯಾಬಲ ಹೊಂದಿರುವ 665 ಸರ್ಕಾರಿ ಪದವಿ |

| | | |
|---|---|---|
| | | ಪೂರ್ವ ಕಾಲೇಜುಗಳಿಗೆ ದೈಹಿಕ ಶಿಕ್ಷಣ ಉಪನ್ಯಾಸಕರ ಹುದ್ದೆಗಳನ್ನು ಮಂಜೂರು ಮಾಡುವ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿತ್ತು. ಆದರೆ, ಆರ್ಥಿಕ ಇಲಾಖೆಯು ಕೋವಿಡ್-19ರ ಸಾಂಕ್ರಾಮಿಕ ರೋಗದ ಪರಿಣಾಮವಾಗಿ ಆರ್ಥಿಕ ನಿರ್ಬಂಧವಿರುವ ಹಿನ್ನೆಲೆಯಲ್ಲಿ ವೆಚ್ಚದ ಬಾಬ್ತಿನಲ್ಲಿ ಮಿತವ್ಯಯ ಸಾಧಿಸಬೇಕಾಗಿರುವುದರಿಂದ ಪ್ರಸ್ತುತ ಪ್ರಸ್ತಾವನೆಯನ್ನು ಒಪ್ಪಲು ಸಾಧ್ಯವಿಲ್ಲವೆಂದು ತಿಳಿಸಿರುತ್ತದೆ.<br><br>ಪ್ರಸ್ತುತ ಆರ್ಥಿಕ ಮಿತವ್ಯಯ ಸಡಿಲಿಸಿರುವ ಹಿನ್ನೆಲೆಯಲ್ಲಿ 2022-23ನೇ ಸಾಲಿನಲ್ಲಿ 120 ಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳ ಸಂಖ್ಯಾಬಲ ಹೊಂದಿರುವ 728 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ದೈಹಿಕ ಶಿಕ್ಷಣ ಉಪನ್ಯಾಸಕರ ಹುದ್ದೆಗಳು ಅವಶ್ಯಕತೆ ಇರುವುದರಿಂದ, ಪ್ರತಿಯೊಂದು ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಒಂದರಂತೆ ಒಟ್ಟು 728 ದೈಹಿಕ ಶಿಕ್ಷಣ ಉಪನ್ಯಾಸಕರ ಹುದ್ದೆಗಳನ್ನು ಸೃಜಿಸುವ ಪ್ರಸ್ತಾವನೆಗೆ ಮೊತ್ತೊಮ್ಮೆ ಆರ್ಥಿಕ ಇಲಾಖೆಯ ಸಹಮತಿ ಕೋರಲಾಗಿದೆ. |
| ಉ) | ಪ್ರೌಢಶಾಲೆಗಳಿಗೆ ನೇಮಕಗೊಂಡ ದೈಹಿಕ ಶಿಕ್ಷಣ ಶಿಕ್ಷಕರಿಗೆ ಪದೋನ್ನತಿ ಇಲ್ಲದೇ ಒಂದೇ ಹುದ್ದೆಯಲ್ಲಿ ಕೆಲಸ ನಿರ್ವಹಿಸಿ ನಿವೃತ್ತರಾಗಬೇಕಿರುವುದರಿಂದ ಶಿಕ್ಷಕರ ಮನೋಬಲ ಕುಗ್ಗುವುದಿಲ್ಲವೇ; ಈ ಬಗ್ಗೆ ಸರ್ಕಾರದ ಚಿಂತನೆ ಏನು? | ಪ್ರೌಢಶಾಲೆಗಳಿಗೆ ನೇಮಕಗೊಂಡ ದೈಹಿಕ ಶಿಕ್ಷಣ ಶಿಕ್ಷಕರುಗಳಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 251 ಡಿಪಿಐ 2009 (ಪಿ), ದಿ:18.04.2012 ರ ಕ್ರಮ ಸಂಖ್ಯೆ: 35ಎ ರನ್ವಯ ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರ ಹುದ್ದೆಗೆ ಕಾಲಕಾಲಕ್ಕೆ ನಿಯಮಾನುಸಾರ ಬಡ್ತಿಯನ್ನು ನೀಡಲಾಗುತ್ತಿದೆ. |

**ಸಂಖ್ಯೆ: ಇಪಿ 30 ಡಿಜಿಡಬ್ಲ್ಯೂ 2023**

(ಬಿ.ಸಿ. ನಾಗೇಶ್)

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಹಾಗೂ ಸಕಾಲ ಸಚಿವರು

| ಕ್ರ. ಸಂ. | ಸಂಕೇತ ಸಂಖ್ಯೆ | ವಿಷಯ | ಖಾಲಿ ಹುದ್ದೆಗಳ ಸಂಖ್ಯೆ |
|---|---|---|---|
| 1 | 1 | ಕನ್ನಡ ಭಾಷೆ | 485 |
| 2 | 2 | ಆಂಗ್ಲ ಭಾಷೆ | 435 |
| 3 | 3 | ಹಿಂದಿ ಭಾಷೆ | 33 |
| 4 | 4 | ತಮಿಳು ಭಾಷೆ | 1 |
| 5 | 5 | ತೆಲುಗು ಭಾಷೆ | 0 |
| 6 | 7 | ಮರಾಠಿ ಭಾಷೆ | 3 |
| 7 | 8 | ಉರ್ದು ಭಾಷೆ | 49 |
| 8 | 9 | ಸಂಸ್ಕೃತ ಭಾಷೆ | 17 |
| 9 | 11 | ಅರೇಬಿಕ್ ಭಾಷೆ | 1 |
| 10 | 21 | ಇತಿಹಾಸ | 344 |
| 11 | 22 | ಅರ್ಥಶಾಸ್ತ್ರ | 489 |
| 12 | 23 | ತರ್ಕಶಾಸ್ತ್ರ | 6 |
| 13 | 24 | ಭೂಗೋಳಶಾಸ್ತ್ರ | 49 |
| 14 | 26 | ಹಿಂದುಸ್ತಾನಿ ಸಂಗೀತ | 2 |
| 15 | 27 | ವಾಣಿಜ್ಯಶಾಸ್ತ್ರ | 498 |
| 16 | 28 | ಸಮಾಜಶಾಸ್ತ್ರ | 413 |
| 17 | 29 | ರಾಜ್ಯಶಾಸ್ತ್ರ | 293 |
| 18 | 31 | ಸಂಖ್ಯಾಶಾಸ್ತ್ರ | 0 |
| 19 | 32 | ಮನಃಶಾಸ್ತ್ರ | 2 |
| 20 | 33 | ಭೌತಶಾಸ್ತ್ರ | 184 |
| 21 | 34 | ರಸಾಯನ ಶಾಸ್ತ್ರ | 150 |
| 22 | 35 | ಗಣಿತ ಶಾಸ್ತ್ರ | 180 |
| 23 | 36 | ಜೀವ ಶಾಸ್ತ್ರ | 286 |
| 24 | 37 | ಭೂಗರ್ಭ ಶಾಸ್ತ್ರ | 1 |
| 25 | 40 | ವಿದ್ಯುನ್ಮಾನ ವಿಜ್ಞಾನ | 4 |
| 26 | 41 | ಗಣಕ ಶಾಸ್ತ್ರ | 17 |
| 27 | 52 | ಶಿಕ್ಷಣ ಶಾಸ್ತ್ರ | 13 |
| | | ಒಟ್ಟು | 3955 |

10-2-23